AUGUST, 04 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಖೇಲೋ ಇಂಡಿಯಾ: ಬೆಳಗಾವಿ ಜಿಲ್ಲೆ, ಚಂದರಗಿ ಕ್ರೀಡಾ ಶಾಲೆಯ, ಅಂತಾರಾಷ್ಟ್ರೀಯ ವೆಲೋಡ್ರೋಮ್, ಶೀಘ್ರ ಲೋಕಾರ್ಪಣೆ.
- ಹುಬ್ಬಳ್ಳಿಯ, ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ ಹಾಗೂ ರಾಷ್ಟ್ರೀಯ ವಯೋಶ್ರೀ ಯೋಜನೆ ಅಡಿ, 14 ಲಕ್ಷ ಮೌಲ್ಯದ ಸಾಧನ, ಉಚಿತ ವಿತರಣೆ.
- ಕೇಂದ್ರ ಪುರಸ್ಕೃತ, ಆರ್ಥಿಕ ಸೇರ್ಪಡೆ ಜನ ಜಾಗ್ರತಿ ಅಭಿಯಾನ; ಕೊಪ್ಪಳ ಜಿಲ್ಲೆಯಲ್ಲಿ, ಯಶಸ್ವಿ ಮುಂದುವರಿಕೆ.
- ಪ್ರಧಾನಮಂತ್ರಿ ಉನ್ನತ ಗ್ರಾಮ ಅಭಿಯಾನ; ಚಿಕ್ಕಮಗಳೂರು ಜಿಲ್ಲೆ ಆಯ್ಕೆ.

<><><>

ಈಗ ವಾರ್ತೆಗಳ ವಿವರ

<><><>

ರಾಷ್ಟ್ರದ ಪ್ರಥಮ ಹಾಗೂ ಏಕೈಕ, ಸಹಕಾರಿ ತತ್ವದಡಿ ಸಂಚಾಲಿತ, ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲೂಕು, ಚಂದರಗಿಯ 'ಸ್ಪೋಕೊ', ಕ್ರೀಡಾ ಉತ್ತೇಜನ ಹಾಗೂ ಅಭಿವೃದ್ಧಿ ಸಹಕಾರಿ ಸಂಸ್ಥೆ ನಿಯಮಿತ, ಗ್ರಾಮೀಣ ಕ್ರೀಡಾ ಶಾಲೆಯಲ್ಲಿ, ಅಂತಾರಾಷ್ಟ್ರೀಯ ಮಾನದಂಡದಡಿ, 150 ಕೋಟಿ ರೂಪಾಯಿ ವೆಚ್ಚದಲ್ಲಿ ಅತ್ಯಾಧುನಿಕವಾಗಿ ನಿರ್ಮಾಣಗೊಂಡ, ಸೈಕ್ಲಿಂಗ್ ವೆಲೋಡ್ರೋಮ್‌ನ್ನು, ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಖಾತೆ ಸಚಿವ, ಮನ್ಸುಖ್ ಮಾಂಡವೀಯ, ಸದ್ಯದಲ್ಲೇ ಉದ್ಘಾಟಿಸಲಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಖೇಲೋ ಇಂಡಿಯಾ ಹಾಗೂ 2036ರ ಭಾರತ ಆಥಿತ್ಯದ, ಪ್ರಸ್ತಾವಿತ ಅಹಮದಾಬಾದ್ ಒಲಿಂಪಿಕ್ಸ್‌ಗೆ ಪೂರಕವಾಗಿ, ಅಂತಾರಾಷ್ಟ್ರೀಯ ಸೈಕ್ಲಿಸ್ಟ್‌ಗಳನ್ನು ರೂಪಿಸುವಲ್ಲಿ, ಚಂದರಗಿ ಗ್ರಾಮೀಣ ಕ್ರೀಡಾ ಶಾಲೆ ಹಾಗೂ ನೂತನ ವೆಲೋಡ್ರೋಮ್ ಮಹತ್ವದ ಪಾತ್ರ ವಹಿಸಲಿದೆ.

ಈ ಕುರಿತು ಒಂದು ವರದಿ..

<><><>

*ಖ್ಯಾತ ಕುಸ್ತಿಪಟು, ರಾಷ್ಟ್ರ ಮಟ್ಟದ ಕುಸ್ತಿ ತರಬೇತುದಾರ, ಕೋ-ಆಪರೇಟಿವ್ ಸೊಸಾಯಿಟಿ ಅಪರ ಜಂಟಿ ನೋಂದಣಾಧಿಕಾರಿ ಹಾಗೂ ಕ್ರೀಡಾ ಶಿಕ್ಷಣ ಪ್ರೇಮಿ, ಸಿದ್ರಾಮ ಕಲೂತಿ ಅವರ ನೇತೃತ್ವದಲ್ಲಿ, ಚಂದರಗಿ ಕ್ರೀಡಾ ಶಾಲೆ, 1983ರಲ್ಲಿ ಕಾರ್ಯಾರಂಭಿಸಿತು.*

*ಗ್ರಾಮೀಣ ಮಕ್ಕಳಿಗೆ, ಕ್ರೀಡೆಯೊಂದಿಗೆ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ, 50 ಕೋಟಿ ರೂಪಾಯಿ ವೆಚ್ಚದಲ್ಲಿ, ಸ್ಪೋರ್ಟ್ಸ್ ಪ್ರಮೋಷನ್ ಆ್ಯಂಡ್ ಡೆವಲಪ್‌ಮೆಂಟ್ ಕೋ ಆಪರೇಟಿವ್ ನಿಯಮಿತ – ಸ್ಪೊಕೊ ಸಂಸ್ಥೆ, ಚಂದರಗಿಯಲ್ಲಿ ಸ್ಥಾಪನೆಯಾಯಿತು.*

*100 ಎಕರೆ ವಿಶಾಲ ಪ್ರಾಂಗಣದಲ್ಲಿ, ಎಸ್.ಎಂ. ಕಲೂತಿ ಸಂಯುಕ್ತ ಕ್ರೀಡಾ ವಸತಿ ಪ್ರೌಢ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಭಾಗದ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ಪ್ರಶಿಕ್ಷಣ ನೀಡಲಾಗುತ್ತಿದೆ.*

*ಗ್ರಾಮೀಣ ವಿದ್ಯಾರ್ಥಿಗಳು, ಕ್ರೀಡೆ ಹಾಗೂ ಶಿಕ್ಷಣದೊಂದಿಗೆ, ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕ ಸುದೃಢತೆ ಹೊಂದಬೇಕು ಎಂಬುದು, ಸಂಸ್ಥೆಯ ಧ್ಯೇಯವಾಗಿದೆ.*

*ರಾಷ್ಟ್ರ ಹಾಗೂ ರಾಜ್ಯ ಮಟ್ಟದ, ಕುಸ್ತಿ, ಈಜು, ಹಾಕಿ, ಕಬಡ್ಡಿ ಸಹಿತ ಅಥ್ಲೆಟಿಕ್ಸ್‌ನಲ್ಲಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಗೆದ್ದು, ಗ್ರಾಮೀಣ ಕ್ರೀಡಾ ಪ್ರತಿಭೆಗಳು, 'ಖೇಲೋ ಇಂಡಿಯಾ' ಕನಸನ್ನು, ನನಸಾಗಿಸುತ್ತಿದ್ದಾರೆ.*

*ಕಳೆದ 40 ವರ್ಷಗಳಲ್ಲಿ, ಸಹಸ್ರಾರು ಕ್ರೀಡಾ ಪ್ರತಿಭೆಗಳನ್ನು ನಾಡಿಗೆ ನೀಡಿದ, ಚಂದರಗಿ ಕ್ರೀಡಾ ಶಾಲೆಯ, ಸಿ.ಇ.ಓ. ಜಗದೀಶ ಮೇಟಿ, ನೂತನ ಸೈಕ್ಲಿಂಗ್ ವೆಲೋಡ್ರೋಮ್ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.*

<><><>

ವಿವೇಕ (60) + ಸಿ.ಇ.ಓ. ಜಗದೀಶ ಮೇಟಿ ಧ್ವನಿ (59) ಸೆಕೆಂದುಗಳು

<><><>

ಧಾರವಾಡ ತಾಲೂಕು, ಹೆಬ್ಬಳ್ಳಿ ಗ್ರಾಮದಲ್ಲಿ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿ, 25 ಲಕ್ಷ ರೂಪಾಯಿ ಅನುದಾನದಡಿ, ನೂತನವಾಗಿ ನಿರ್ಮಿಸಿದ, ಹೆಣ್ಣು ಮಕ್ಕಳ ಹಾಗೂ ಗಂಡು ಮಕ್ಕಳ ಸರ್ಕಾರಿ ಶಾಲೆಯ ಭೋಜನಾಲಯವನ್ನು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಉದ್ಘಾಟಿಸಿದರು. 18 ಲಕ್ಷ ರೂಪಾಯಿ ಅನುದಾನದಲ್ಲಿ, ನೂತನವಾಗಿ ನಿರ್ಮಿಸಿದ, ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ, ಅವರು ಚಾಲನೆ ನೀಡಿದರು. ಭಾರತೀಯ ಕೃತಕ ಅಂಗಗಳ ಉತ್ಪಾದನಾ ನಿಗಮ ALIMCO, ಹುಬ್ಬಳ್ಳಿಯ 'ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ' PMDK ವತಿಯಿಂದ, ಕೇಂದ್ರ ಪುರಸ್ಕೃತ ಅಡಿಪ್ ಯೋಜನೆಯಡಿ, 3 ಲಕ್ಷ 90 ಸಾವಿರ ರೂಪಾಯಿ ವೆಚ್ಚದ, 36 ಸಾಧನ-ಸಲಕರಣೆ, ರಾಷ್ಟ್ರೀಯ ವಯೋಶ್ರೀ ಯೋಜನೆ ಅಡಿ, ಹಿರಿಯ ನಾಗರಿಕರಿಗೆ 11 ಲಕ್ಷ ಮೌಲ್ಯದ, 758 ಸಲಕರಣೆಗಳನ್ನು, 158 ಜನರಿಗೆ, ಉಚಿತವಾಗಿ ಸಚಿವರು ವಿತರಿಸಿದರು.

<><><>

ಪರಿಶಿಷ್ಟ ಸಮುದಾಯದ, ಒಳ ಮೀಸಲಾತಿ ಜಾರಿ ಅಧ್ಯಯನಕ್ಕಾಗಿ, ರಾಜ್ಯ ಸರ್ಕಾರ ರಚಿಸಿದ್ದ, ನ್ಯಾಯಮೂರ್ತಿ ನಾಗಮೋಹನ ದಾಸ ನೇತೃತ್ವದ ಆಯೋಗ, ಇಂದು ವರದಿ ಸಲ್ಲಿಸಲಿದೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಆಯೋಗದ ವರದಿಯ ಶಿಫಾರಸುಗಳ ಅನ್ವಯ, ನಿಖರವಾದ ದತ್ತಾಂಶ ಪಡೆದು, ಒಳ ಮೀಸಲಾತಿ ಜಾರಿಗೆ, ಕ್ರಮ ಕೈಗೊಳ್ಳಲಾಗುವುದು, ಎಂದರು. ಪರಿಶಿಷ್ಟ ಜಾತಿಯ ಯಾವುದೇ ಒಳ ಪಂಗಡಗಳಿಗೂ, ಅನ್ಯಾಯವಾಗದ ರೀತಿಯಲ್ಲಿ, ಒಳ ಮೀಸಲಾತಿ ಜಾರಿಗೊಳಿಸಲು ಸರ್ಕಾರ ಉದ್ದೇಶಿಸಿದೆ. ಗ್ರಾಮೀಣ ಭಾಗದಲ್ಲಿ ಶೇಕಡ 95 ರಷ್ಟು ದತ್ತಾಂಶ ಸಂಗ್ರಹವಾಗಿದ್ದು, ನಗರ ಪ್ರದೇಶ ವ್ಯಾಪ್ತಿಯಲ್ಲಿ ದತ್ತಾಂಶ ಸಂಗ್ರಹಣೆ ಪ್ರಮಾಣ ಕಡಿಮೆಯಾಗಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ, ಸಮಗ್ರವಾಗಿ ಚರ್ಚಿಸಿ, ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು, ಎಂದು ಸಚಿವರು ಹೇಳಿದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(1 ನಿ. 4 ಸೆ.)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ದೇಶಾದ್ಯಂತ ಕೆ.ವೈ.ಸಿ. ಅಭಿಯಾನ ನಡೆಯುತ್ತಿದೆ; ಜನ್ ಧನ್ ಖಾತೆದಾರರ ಪ್ರಕ್ರಿಯೆಯನ್ನು, ಸರಳಗೊಳಿಸಲು ಅನುವಾಗುವಂತೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಶಿಬಿರಗಳನ್ನು ನಡೆಸಲಾಗುತ್ತಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

<><><>

ಶ್ರೀಸಾಮಾನ್ಯರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಒದಗಿಸುವ, ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಜೀವನ ಜ್ಯೋತಿ, ಜೀವನ ಸುರಕ್ಷಾ ಹಾಗೂ ಅಟಲ್ ಪಿಂಚಣಿ ಯೋಜನೆ ಕುರಿತು, ಕೊಪ್ಪಳ ಜಿಲ್ಲೆ, ಕುಕನೂರು ತಾಲೂಕು, ಮಂಗಳೂರು ಗ್ರಾಮದಲ್ಲಿ, ಜನ ಜಾಗೃತಿ ಅಭಿಯಾನ ನಡೆಯಿತು.ಆರ್ಥಿಕ ಸೇರ್ಪಡೆ ಅಭಿಯಾನದಲ್ಲಿ ಪಾಲ್ಗೊಂಡಿದ್ದ, ಕುದುರೆಮೂತಿ ಗ್ರಾಮದ ನಾಗಪ್ಪ ತಲ್ಲೂರ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಾಗಪ್ಪ ತಲ್ಲೂರ ಧ್ವನಿ 20 ಸೆಕೆಂದುಗಳು

<><><>

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಸಂಚಾಲಿತ, ಧರ್ತಿ ಆಬಾ, ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ್ ಹಾಗೂ ಪ್ರಧಾನಮಂತ್ರಿ ಉನ್ನತ ಗ್ರಾಮ ಅಭಿಯಾನದಡಿ, ವನವಾಸಿಗರು ಹೋಂ ಸ್ಟೇ ನಿರ್ಮಿಸಲು ಹಾಗೂ ಅಭಿವೃದ್ಧಿ ಪಡಿಸಲು, ಸಹಾಯ ಧನ ನೀಡಲಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲೂಕು, ನೆಮ್ಮಾರು ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಮಲನಾಡು ಗ್ರಾಮ, ಕೊಪ್ಪ ತಾಲೂಕಿನ ಗುಡ್ಡೆ ತೋಟ ಗ್ರಾಮ ಪಂಚಾಯಿತಿಯ ಮೇಗೂರು ಗ್ರಾಮ, ಅಜ್ಜಂಪುರ ತಾಲೂಕಿನ ಬೇಗೂರು ಗ್ರಾಮ ಪಂಚಾಯಿತಿಯ, ಭೂತನಕಾಡು ಗ್ರಾಮಗಳನ್ನು ಈ ಯೋಜನೆಯಡಿ ಗುರುತಿಸಲಾಗಿದೆ ಎಂದು, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

<><><>

ವನವಾಸಿಗರ ಸಂಸ್ಕೃತಿ, ಖಾದ್ಯ ವಿಶೇಷ, ಸ್ಥಳೀಯ ಪರಿಸರ ಹಾಗೂ ಜೀವ ವೈವಿಧ್ಯ ಪರಿಚಯಿಸಲು ಅನುವಾಗುವಂತೆ, ಬುಡಕಟ್ಟು ಜನಾಂಗಕ್ಕೆ ಸೇರಿದ ವನವಾಸಿಗರು, ಹೋಂ ಸ್ಟೇ ನಿರ್ಮಿಸಿದಲ್ಲಿ 5 ಲಕ್ಷ ರೂಪಾಯಿ ಹಾಗೂ ನವೀಕರಣಕ್ಕೆ 3 ಲಕ್ಷ ರೂಪಾಯಿ, ಕೇಂದ್ರ ಸರ್ಕಾರ ನೀಡಲಿದೆ.

<><><>

'ಹರ್ ಘರ್ ತಿರಂಗಾ ಅಭಿಯಾನ'ದ ಹಿನ್ನೆಲೆ, ಬೆಂಗಳೂರಿನಬಿ.ಜೆ.ಪಿ. ರಾಜ್ಯ ಕಾರ್ಯಾಲಯದಲ್ಲಿ,ಇಂದು ಬೆಳಗ್ಗೆ 11 ಗಂಟೆಗೆ, ರಾಜ್ಯ ಮಟ್ಟದ ಪೂರ್ವಭಾವಿ ಸಭೆ ಜರುಗಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ದಕ್ಷಿಣ ಭಾರತದ 'ಹರ್ ಘರ್ ತಿರಂಗಾ' ಅಭಿಯಾನದ ಪ್ರಮುಖ, ಕೇರಳದ, ಕೆ. ಸುರೇಂದ್ರನ್ ಸೇರಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕು, ಶಿಂಧಿ ಕುರಬೇಟ ಗ್ರಾಮದ, ವಿಠ್ಠಲ ಮಂದಿರದ ಆವರಣದಲ್ಲಿ, 23 ವರ್ಷದೊಳಗಿನವರ, ರಾಜ್ಯ ಮಟ್ಟದ, ಕುಸ್ತಿ ಪಂದ್ಯಾವಳಿ, ಇಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ. ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ, ಪ್ರಥಮ ಸ್ಥಾನಗಳಿಸುವ ಕುಸ್ತಿಪಟುಗಳು, ರಾಂಚಿಯಲ್ಲಿ ಆಯೋಜಿತ, 23 ವರ್ಷದೊಳಗಿನ ರಾಷ್ಟ್ರೀಯ ಕುಸ್ತಿ ಪಂದ್ಯಾವಳಿಗೆ ನೇರವಾಗಿ ಆಯ್ಕೆಯಾಗಲಿದ್ದಾರೆ ಎಂದು, ಕ್ರೀಡಾ ಇಲಾಖೆಯ, ಕೊಪ್ಪಳ ಜಿಲ್ಲೆ ಸಹಾಯಕ ನಿರ್ದೇಶಕ, ವಿಠ್ಠಲ್ ಜಾಬಗೌಡರ ತಿಳಿಸಿದ್ದಾರೆ.

<><><>

ಅರಣ್ಯ ಇಲಾಖೆಯ, ಧಾರವಾಡ ವಲಯ ಮಟ್ಟದ ಕ್ರೀಡಾಕೂಟ, ಇಂದು ಬೆಳಗ್ಗೆ 9 ಗಂಟೆಗೆ, ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ, ಆಯೋಜಿತವಾಗಿದೆ. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಂತೋಷಕುಮಾರ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದು, ಧಾರವಾಡ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಿ.ಯತೀಶಕುಮಾರ, ಅಧ್ಯಕ್ಷತೆ ವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಕ್ರೀಡಾಪಟು, ಆದಿತಿ ಕ್ಷಾತ್ರತೇಜ ಹಾಗೂ ಸ್ವಯಂ ಕಠಾರೆ ಅಥಿತಿಗಳಾಗಿ ಪಾಲ್ಗೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಖೇಲೋ ಇಂಡಿಯಾ; ಬೆಳಗಾವಿ ಜಿಲ್ಲೆ, ಚಂದರಗಿ ಕ್ರೀಡಾ ಶಾಲೆಯ, ಅಂತಾರಾಷ್ಟ್ರೀಯ ವೆಲೋಡ್ರೋಮ್, ಶೀಘ್ರ ಲೋಕಾರ್ಪಣೆ.
- ಹುಬ್ಬಳ್ಳಿಯ, ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ ಹಾಗೂ ರಾಷ್ಟ್ರೀಯ ವಯೋಶ್ರೀ ಯೋಜನೆ ಅಡಿ, 14 ಲಕ್ಷ ಮೌಲ್ಯದ ಸಾಧನ, ಉಚಿತ ವಿತರಣೆ.
- ಕೇಂದ್ರ ಪುರಸ್ಕೃತ, ಆರ್ಥಿಕ ಸೇರ್ಪಡೆ ಜನ ಜಾಗ್ರತಿ ಅಭಿಯಾನ; ಕೊಪ್ಪಳ ಜಿಲ್ಲೆಯಲ್ಲಿ, ಯಶಸ್ವಿ ಮುಂದುವರಿಕೆ.
- ಪ್ರಧಾನಮಂತ್ರಿ ಉನ್ನತ ಗ್ರಾಮ ಅಭಿಯಾನ; ಚಿಕ್ಕಮಗಳೂರು ಜಿಲ್ಲೆ ವನವಾಸಿಗರಿಗೆ, ಸಹಾಯ ಧನಕ್ಕಾಗಿ, ಅರ್ಜಿ ಆಹ್ವಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>